ಜಾಕೋಬ್ ಡಿಸೋಜ, ಕುರುವಳ್ಳಿ
*ಕೆಲವರು ಬರೀ ಉಪದೇಶ ಮಾಡ್ತಾ ಇರ್ತಾರೆ. ಇವರಿಗೆ ಏನು ಹೇಳಬೇಕು?*



ತಲೆಗೆ ಬುದ್ಧಿ ಹೇಳಿದ್ದು ಸಾಕು. ಇನ್ನು ಕಾಲಿಗೆ ಬುದ್ಧಿ ಹೇಳಿ!

ಚೈತ್ರಾ ಕುಕ್ಕೆಮನೆ, ಬೆಂಗಳೂರು
*ಇಷ್ಟು ವರ್ಷ ಜೊತೆಗಿದ್ದ ನಾಯಿ ಈಗ ಅಕಸ್ಮಾತ್ತಾಗಿ ಓಡಿಹೋದರೆ ಏನು ಮಾಡುವುದು ಸಾರ್...?*
ಯಾವ ಓಬೀರಾಯನ ಕಾಲದವರಮ್ಮಾ ನೀವು? ಈಗಿನ ಕಾಲದಲ್ಲಿ ನಾಯಿಯಲ್ಲ, ತಾಯಿ ಓಡಿಹೋದರೂ ಜನ ಕೇರ್ ಮಾಡುವುದಿಲ್ಲ!

ನೇ.ಗೋ.ಭ, ಕುಕ್ಕೆಸುಬ್ರಹ್ಮಣ್ಯ
*ಸಾಹಿತಿಗಳ ಒಂದು ಕಾಲು ಮತ್ತೊಬ್ಬರ ಚಪ್ಪಲಿಯೊಳಗಂತೆ. ಹಾಗಾದರೆ ನಿಮ್ಮ ಕೈಯಲ್ಲಿನ ಪೆನ್ನು ಯಾರ ಕಿಸೆಯದ್ದು ರಾಮ್‌ಜೀ?*
ಹೇಗೆ ಹೇಳಲಿ? ನಾನು ದಿನಕ್ಕೊಂದು ಪೆನ್ ಬಳಸುವವನು!

ಮಹಾಂತಯ್ಯ ಕೆ. ಮಠ, ಹೂವಿನಹಳ್ಳಿ
*ಈಗಿನ ಕಾಲದಲ್ಲಿ ಜನ ಮರುಳೋ, ಜಾತ್ರೆ ಮರುಳೋ?*



ಜನರೇ. ಕುಳಿತಲ್ಲೇ, ಜಾಹೀರಾತು ನೋಡೇ, ಮರುಳಾಗುತ್ತಾರೆ!

ಸಡ್ಲಪಲ್ಲಿ ರಾಮಕೃಷ್ಣಾರೆಡ್ಡಿ, ಬೆಂಗಳೂರು
*ಗಡಿಯಾರದಿಂದ ನಮಗೇನು ಉಪಯೋಗ?*
ಏನೇನೂ ಇಲ್ಲ. ನಮ್ಮ ಸಮಯಪ್ರಜ್ಞೆಗೆ ಕ್ಯಾಲೆಂಡರ್ರೇ ಸಾಕು.

ಪಿ.ಎನ್. ಶ್ರೀವತ್ಸ, ಬೆಂಗಳೂರು
*ಉತ್ತಮ ಪ್ರಶ್ನೆ ಕೇಳುವವರನ್ನು ನಿಮ್ಮ ಉತ್ತರಾಧಿಕಾರಿಯಾಗಿ ನೇಮಿಸಿದರೆ ಹೇಗಿರುತ್ತೆ?*
ಒಳ್ಳೆಯದೇ; ಆದರೆ ಒಂದೇ ತೊಂದರೆ; ನನ್ನ ನಿಧನಕ್ಕೆ/ನಿವೃತ್ತಿಗೆ ಅವರು 60-70 ವರ್ಷಗಳು ಕಾಯಬೇಕಲ್ಲ!

ಹಾಡ್ಯ ಬಿ. ಜಯಾನಂದ, ಮೈಸೂರು
*ಬದುಕು ಜಟಕಾ ಬಂಡಿ ಎಂದರು ಡಿವಿಜಿ ರೈಲುಬಂಡಿ ಎನ್ನುತ್ತಾರೆ ಕೆಲವರು. ನೀವೇನಂತೀರಿ?*
ಮಾಡಿದ, ಮಾಡದ ತಪ್ಪಿಗೆಲ್ಲಾ ಬಂಡಿಗಟ್ಟಲೆ ಉಗಿಸಿಕೊಳ್ಳುವುದರಿಂದ ಉಗಿಬಂಡಿ!

ಪಿ.ಜೆ.ರಾಘವೇಂದ್ರ, ಮೈಸೂರು
*ನೀವು ಸುಳ್ಳು ಹೇಳುವುದನ್ನು ನಿಲ್ಲಿಸಿದ್ದೀರಾ...?*
ನಿಮ್ಮ ಮನೆಯ ಮುಂದೆಯೇ ನಿಲ್ಲಿಸಿದ್ದೀನಲ್ಲಾ... ದಿನವೂ ನೀವು ಅದರ ಮೇಲೆಯೇ ಸವಾರಿ ಹೋಗುವುದಲ್ಲವೇ...?

ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ
*ಪ್ರೀತಿಯಿಂದ ಆಕರ್ಷಣೆ ಹುಟ್ಟುತ್ತದೋ ಅಥವಾ ಆಕರ್ಷಣೆಯಿಂದ ಪ್ರೀತಿಯೋ?*
ತನ್ನದೇ ಆದಾಗ ಪ್ರೀತಿ ಮೊದಲು, ಹೊರಗಿನದಾದಾಗ ಆಕರ್ಷಣೆ ಮೊದಲು.

ಜೆ.ಸಿ.ರವಿಕುಮಾರ್, ಜಯಸುವರ್ಣಪುರ
*ಎಲ್ಲಾ ಸಾಹಿತಿಗಳ ಬದುಕೂ ಸಾಮಾನ್ಯವಾಗಿ ಅಷ್ಟಕಷ್ಟೆ. ಏಕೆ?*
ಏಕೆಂದರೆ ಅವರ ಬದುಕು ಅವರದೇ ಆದ ಇಷ್ಟಕ್ಕಷ್ಟೆ!

ಡಿ.ಕೆ. ರಾಜ್, ಗದಗ
*ಕುದುರೆಗೆ ಇರೋ ಬೆಲೆ ಕತ್ತೆಗೆ ಯಾಕಿಲ್ಲ?*
ಓಟಕ್ಕೆ ತಕ್ಕಂತೆ ನೋಟು ಎಂಬುದು ಜಗದ ನಿಯಮ. ಓಡದ ಕುದುರೆ ಕತ್ತೆಗಿಂತಲೂ ಕೀಳು.

ಅರಕೆರೆ ಪಿ. ಸುರೇಶ್, ಭದ್ರಾವತಿ
*ಪ್ರೇಮಿಗಳೇಕೆ ಒಂದೇ ಬಟ್ಟಲಲ್ಲಿ ಐಸ್‌ಕ್ರೀಂ ತಿನ್ನುತ್ತಾರೆ?*
ಕಡಿಮೆ ವೆಚ್ಚ, ಹೃದಯ ಬೆಚ್ಚ!

ಆರ್. ನಾಗರಾಜ್ ಗೊರೂರು
*ದುಃಖಕ್ಕೆ ಅತ್ತಾಗಲೂ ಕಣ್ಣೀರಿನ ರುಚಿ ಉಪ್ಪು; ಆನಂದಬಾಷ್ಪ ಸುರಿಸಿದಾಗಲೂ ಕಣ್ಣೀರು ಉಪ್ಪುಪ್ಪು. ಹೀಗೇಕೆ?*
ಕಣ್ಣೀರು ಮನಸ್ಸಿನಿಂದ ಮೂಡಿದ್ದರೆ ರುಚಿ ಬೇರೆ ಇರುತ್ತಿತ್ತು. ಆದರೆ ಗ್ರಂಥಿಗೆ ಮನಸ್ಸಿಲ್ಲ, ಮನಸ್ಸಿಗೆ ಗ್ರಂಥಿ ಇಲ್ಲ!

## ಬಹುಮಾನಿತ ಪ್ರಶ್ನೆ

ಶ್ವೇತಾಲಕ್ಷ್ಮಿ ಅಮೃ, ಬೆಂಗಳೂರು
*ಸುಳ್ಳನ್ನು ನಂಬುವಷ್ಟು ಬೇಗ ಜನ ಸತ್ಯವನ್ನು ನಂಬುವುದಿಲ್ಲ. ಯಾಕೆ?*
ಸುಳ್ಳು ಪ್ರೇಯಸಿ; ಸತ್ಯ ಪತ್ನಿ. ಪ್ರೇಯಸಿಯ ನುಡಿನುಡಿಯಲ್ಲೂ ನಂಬಿಸುವ ಆಕರ್ಷಣೆ ಇರುತ್ತದೆ!

ವಿ. ಹಮೀದ್, ವಿಟ್ಲ
*ನಾನು ನಿಮ್ಮ ಹೃದಯವನ್ನು ಕದಿಯಬೇಕೆಂದಿದ್ದೇನೆ. ಯಾವಾಗ ಫ್ರೀ ಇರುತ್ತೀರಾ?*
ಕ್ಷಮಿಸಿ ಹೃದಯವನ್ನು ನನ್ನವರು ಕದ್ದಿದ್ದಾರೆ, ಕಿಡ್ನಿಯನ್ನು ಡಾಕ್ಟರ್ ಕದ್ದಿದ್ದಾರೆ. ನಿಮಗೆ ಹೆಚ್ಚೆಂದರೆ ಒಂದು ಕಣ್ಣು ಸಿಕ್ಕೀತಷ್ಟೆ!

ಮಲ್ಲಿಕಾರ್ಜುನ ಆರ್. ಹುಲಗಬಾಳಿ, ಬನಹಟ್ಟಿ
*ಸರಳತೆ ರಿಯಾಲಿಟಿ ಆದರೆ ಉತ್ಪ್ರೇಕ್ಷೆ ಸ್ಪೆಷಾಲಿಟಿ. ಸಮನ್ವಯತೆ?*
ಸೂಪರ್ ಸ್ಪೆಷಾಲಿಟಿ.

ಹೆಚ್.ಆರ್. ಕಡಿವಾಲ, ಬದಾಮಿ
*ಜಗತ್ತಿನಲ್ಲಿ ಸರಳವಾಗಿ ಸಿಗುವುದೇನು ಸಾರ್?*
ಬಡವರ ಮನೆಯ ಹೆಣ್ಣು.

ನವಿರವಿ, ಬಾಳೆಹೊನ್ನೂರು
*ಕಳ್ಳನ ಹೆಂಡತಿ ಎಂದಿದ್ದರೂ ವಿಧವೆ, ಕುಡುಕನ ಹೆಂಡತಿ?*



ಅದೇ ವಿಧವೆ!

ಆರ್. ಮಧುಸೂದನ್, ಹಾಸನ
*ನವರತ್ನದ ಉಂಗುರ ಹಾಕಿಕೊಂಡರೂ ನನ್ನ ಅದೃಷ್ಟ ಬದಲಾಗಲಿಲ್ಲವಲ್ಲ?*
ಬದಲಾಗದ ಮಟ್ಟಕ್ಕೆ ಕೆಡಿಸಿಕೊಂಡದ್ದೂ ನೀವೇ ಅಂತೆ!

ಚನ್ನಪಸವ ಪುತ್ತೂರ್ಕರ, ಚಿತ್ರದುರ್ಗ
*ಸಂಶಯಕ್ಕೇನಾದರೂ ಮದ್ದುಂಟೆ?*
ಇದೆಯಲ್ಲಾ... ವಿಶಾಲಹೃದಯ!

■ ರಾಮ್